International Journal of Kannada Research 2021; 7(4): 184-186

International Journal of Kannada Research
www.kannadajournal.com

ISSN: 2454–5813
IJKR 2021; 7(4): 184-186
© 2021 IJKR
www.kannadajournal.com
Received: 19-08-2021
Accepted: 21-09-2021

**ಡಾ. ರವಿರಾಜ ಶೆಟ್ಟಿ**
ಕನ್ನಡ ಸಹಪ್ರಾಧ್ಯಾಪಕರು
ಡಾ.ಜಿ. ಶಂಕರ್ ಸರಕಾರಿ ಮಹಿಳಾ
ಪ್ರಥಮ ದರ್ಜೆ ಕಾಲೇಜು
ಮತ್ತು ಸ್ನಾತಕೋತ್ತರ ಅಧ್ಯಯನ
ಕೇಂದ್ರ, ಅಜ್ಜರಕಾಡು, ಉಡುಪಿ.

**Corresponding Author:**
**ಡಾ. ರವಿರಾಜ ಶೆಟ್ಟಿ**
ಕನ್ನಡ ಸಹಪ್ರಾಧ್ಯಾಪಕರು
ಡಾ.ಜಿ. ಶಂಕರ್ ಸರಕಾರಿ ಮಹಿಳಾ
ಪ್ರಥಮ ದರ್ಜೆ ಕಾಲೇಜು
ಮತ್ತು ಸ್ನಾತಕೋತ್ತರ ಅಧ್ಯಯನ
ಕೇಂದ್ರ, ಅಜ್ಜರಕಾಡು, ಉಡುಪಿ.

# ಕನಕದಾಸರ ಮೋಹನ ತರಂಗಣಿ – ಒಂದು ಸಂವಾದ

**ಡಾ. ರವಿರಾಜ ಶೆಟ್ಟಿ**

ಹದಿನಾರನೆಯ ಶತಮಾನವನ್ನು ಪ್ರತಿನಿಧಿಸುವ ಕನಕದಾಸರನ್ನು ೨೧ನೇ ಶತಮಾನದಲ್ಲಿ ನಿಂತು ಮರು ಓದಿಗೆ ಒಳಪಡಿಸುವ ಪ್ರಯತ್ನ ಒಂದು ಕ್ರಾಂತಿಕಾರಿ ಬೆಳವಣಿಗೆಯಾಗಿ ಆಸ್ಥಿತ್ವವನ್ನು ಪಡೆದುಕೊಂಡಿದೆ. ಆಧುನಿಕ ಸಂದರ್ಭದಲ್ಲಿ ಮರುಜೀವ ಪಡೆದ ಕನಕಸಂಬಂಧಿ ಅಧ್ಯಯನಗಳು ಕಾಲದಿಂದ ಕಾಲಕ್ಕೆ ಹೊಸ ಹೊಳಹುಗಳನ್ನು ನೀಡುತ್ತಿವೆ. ವಿವರಣಾತ್ಮಕ ನೆಲೆಯಿಂದ ಆರಂಭಗೊಂಡ ಈ ಅಧ್ಯಯನಕ್ರಮಗಳು ಇಂದು ಅಂತರ್ ಶಿಸ್ತೀಯ ನೆಲೆಯ ಸಂಶೋಧನಾತ್ಮಕ ಅಧ್ಯಯನ ವಿಧಾನಗಳಿಗೆ ತೆರೆದುಕೊಂಡಿದೆ. ತಳಸಮುದಾಯದ ಆಲೋಚನೆಗಳಿಗೆ ವೇದಿಕೆ ಪ್ರಾಪ್ತವಾಗುತ್ತಿರುವ ಇಂದಿನ ದಿನಗಳಲ್ಲಿ ಕನಕಸಂಬಂಧಿಯಾದ ಸಂಶೋಧನಾತ್ಮಕ ಅಧ್ಯಯನಗಳು ಔಚಿತ್ಯಪೂರ್ಣವೆನಿಸಿವೆ. ಹಿಂದುಳಿದ ವರ್ಗದ ಅವಕಾಶ ವಂಚಿತ ಸಮುದಾಯಗಳ ಸಾಂಸ್ಕೃತಿಕ ನಾಯಕರಾಗಿ ಕನಕರು ಗುರುತಿಸಲ್ಪಡುತ್ತಿರುವಾಗ ಅವರ ಸಂದೇಶಗಳು ಹೆಚ್ಚು ಮೌಲ್ಯ ಪೂರ್ಣವೆನಿಸಿವೆ. ಅವರ ಬರಹಗಳಷ್ಟೇ ಮುಖ್ಯವಾಗಿ ಅವರ ಬದುಕನ್ನು ಓದುವ ಪ್ರಯೋಗಶೀಲ ಪ್ರಯತ್ನಗಳು ನಡೆದಿವೆ. ಈ ಎಲ್ಲ ಬಗೆಯ ಅಧ್ಯಯನಾತ್ಮಕ ಪ್ರಯತ್ನಗಳು ಕನಕರ ಕುರಿತಾದ ಬಹುರೂಪಿ ಓದಿಗೆ ಮತ್ತು ಕನಕದಾಸರ ಪ್ರಸ್ತುತತೆಗೆ ಸಾಕ್ಷಿಗಳಂತಿವೆ.

ಕನ್ನಡದ ಜನಮಾನಸದಲ್ಲಿ ಸದಾಭಕ್ತಿ ಮತ್ತು ವೈಚಾರಿಕೆತಯ ತರಂಗಗಳನ್ನು ಮೂಡಿಸುತ್ತಿರುವ ದಾಸಪರಂಪರೆಯ ಸೃಜನಶೀಲ ವ್ಯಕ್ತಿತ್ವದ ಕವಿ ಕನಕದಾಸರು. ದೇಶಿಯ ಛಂದಸ್ಸಿನಲ್ಲಿ ಮಹಾಕಾವ್ಯದ ಲಕ್ಷಣಗಳನ್ನು ಮೈಗೂಡಿಸಿಕೊಂಡ ಕನ್ನಡದ ಗಮನಾರ್ಹ ಸಾಂಗತ್ಯ ಕೃತಿ ಕನಕರ ಮೋಹನ ತರಂಗಿಣಿ.ಭೋಗಮೂಲವಾದ ಶೃಂಗಾರ ಮತ್ತು ಭಕ್ತಿಯ ಭಾವಗಳನ್ನು ಸಮೀಕರಿಸಿದ್ದು, ಇಲ್ಲಿಯ ವಿಶೇಷತೆ. ದಾಸರಾಗಿ ಪರಿವರ್ತನೆ ಹೊಂದಿದ ಕಾಲಘಟ್ಟದಲ್ಲಿ ಉತ್ಥಾನ ಶೃಂಗಾರವನ್ನು ಮೇರೆ ಮೀರಿ ಬಳಸಿದರು, ಎನ್ನುವ ಅಪಖ್ಯಾತಿಗೂ ಗುರಿಯಾದದ್ದು ಮೋಹನ ತರಂಗಿಣಿಯಿಂದಲೇ. ವೈಷ್ಣವ ಭಕ್ತಿ, ಶರಣ–ಸಂಪ್ರದಾಯದ ಶಿವಭಕ್ತಿ, ದಾಸರವೇಣ್ಯರ ದ್ವೈತಭಾವ ಇವೆಲ್ಲವನ್ನೂ ತನ್ನ ಬದುಕಿನ ಹದಕ್ಕೆ ಬಗ್ಗಿಸಿಕೊಂಡು ಅದ್ವೈತ ಸಾಧನೆ ಮಾಡಿದ ಕನಕರು, ಶೃಂಗಾರ–ಪ್ರಣಯ–ಪ್ರೇಮ–ಭಾವನೆಗಳನ್ನು ತನ್ನ ಕಾವ್ಯ ನಿರ್ಮಿತಿಗೆ ಧಾರಳವಾಗಿ ಬಳಸಿಕೊಂಡು ಚರ್ಚೆಗೆ ನಾಂದಿಯಾದರು. ಕನಕದಾಸರು ಮುಂದಿನ ಕಾವ್ಯ ಸಾಧನೆಯ ಅಡಿಗಲ್ಲಾಗಿ ಮೋಹನ ತರಂಗಿಣಿಯನ್ನು ಗಮನಿಸಬಹುದು.

ಕನಕದಾಸರ ಮೋಹನ ತರಂಗಿಣಿ ೪೨ ಸಂಧಿಗಳಲ್ಲಿ ಸು. ೨೮೦೦ ಸಾಂಗತ್ಯ ಪದ್ಯಗಳಲ್ಲಿ ರಚಿತವಾಗಿರುವ ಬೃಹತ್ ಕಾವ್ಯ. ಕೃಷ್ಣವಂಶದ ಮೂರು ತಲೆಮಾರಿನ ಕಥೆಯನ್ನು ಹೊಂದಿರುವ ಈ ಕಾವ್ಯ ವ್ಯಾಪ್ತಿಯಲ್ಲಿ ಮೂರು ಕಾವ್ಯವಾಗಿ ನಿಲ್ಲಬಲ್ಲ ವಸ್ತು ವಿಸ್ತಾರವನ್ನು ಹೊಂದಿದೆ. ಶ್ರೀ ಕೃಷ್ಣನ ದಿವ್ಯವಾದ ಚರಿತ್ರೆಯನ್ನು ವಿವರಿಸುತ್ತಲೇ ತನ್ನ ಸಮಕಾಲೀನ ಬದುಕಿನ ಸಮಾಜಿಕ ವಿವರಗಳನ್ನು ಕಾವ್ಯದಲ್ಲಿ ಸಹಜವೆಂಬಂತೆ ವಿವರಿಸಿದ್ದಾರೆ. ಶ್ರೀಕೃಷ್ಣನ ದ್ವಾರಕೆಯ ವರ್ಣನೆಯಲ್ಲಿ ವಿಜಯನಗರದ ಶ್ರೀಕೃಷ್ಣದೇವರಾಯನನ್ನು ಕಾಣಬಹುದಾಗಿದೆ. ಶೃಂಗಾರ ಮುತ್ತು ವೀರರಸವನ್ನೇ ಪ್ರಧಾನವಾಗಿರಿಸಿ, ವರ್ಣನಾ ಪ್ರಧಾನವಾಗಿ ಸಮಕಾಲೀನ ಬದುಕಿನ ಸಾಮಾಜಿಕ ವಿವರಗಳನ್ನು ಕಟ್ಟಿಕೊಡುವಲ್ಲಿ ಕನಕರ ಪ್ರತಿಭೆ ಶ್ರಮವಹಿಸಿದೆ. ಮೋಹನ ತರಂಗಿಣಿಯಲ್ಲಿ ಪ್ರತಿಪಾದಿತವಾಗಿರುವ ಕೆಲವು ಪ್ರಮುಖ ವಿಚಾರಧಾರೆಗಳು, ಕನಕರ ವಿಶಾಲವಾದ ವ್ಯಕ್ತಿತ್ವ ತೆರೆದುಕೊಳ್ಳಬಹುದಾದ ರೀತಿಯನ್ನು ಚರ್ಚಿಸುವುದು ಮಾತ್ರ ನನ್ನ ಈ ಪ್ರಬಂಧದ ಉದ್ದೇಶ.

ಮೋಹನ ತರಂಗಿಣಿ ಪ್ರೇಮವಿವಾಹ ಮತ್ತು ಸುಖದಾಂಪತ್ಯದ ಕಥೆಯೂ ಹೌದು, ಅದರ ಪರಿಣಾಮವಾಗಿ ನಡೆದ ಸಂಹಾರದ ಕಥೆಯೂ ಹೌದು.ಕೃಷ್ಣ ಮತ್ತು ರುಕ್ಮಿಣಿಯರ ಸುಖದಾಂಪತ್ಯದಿಂದ ಪ್ರಾರಂಭವಾಗುವ ಕಥೆಯ ಮುಂದುವರಿಕೆಯ ಭಾಗವಾಗಿ ಶಿವಪಾರ್ವತಿಯರ ದಾಂಪತ್ಯಕ್ಕಾಗಿ ಮನ್ಮಥನ

ದಹನದ ಕಥೆ, ರತಿಪ್ರದ್ಯುಮ್ನರ ವಿವಾಹಕ್ಕಾಗಿ ಶಂಬರಾಸುರನ ಸಂಹಾರ, ಉಷೆ-ಅನಿರುದ್ಧದ ಪ್ರೇಮವಿವಾಹಕ್ಕಾಗಿ ಬಾಣಾಸುರನ ಸಂಹಾರ ನಡೆಯುತ್ತದೆ. ತರಂಗಿಣಿಯ ಮೊದಲ ನಾಲ್ಕು ಸಂಧಿಗಳಲ್ಲಿ ಶ್ರೀಕೃಷ್ಣ-ರುಕ್ಮಿಣಿ, ನಂತರದ ಹನ್ನೆರಡು ಸಂಧಿಗಳಲ್ಲಿ ಪ್ರದ್ಯುಮ್ನ ಮತ್ತು ರತಿಯ ವಿಚಾರ ಕೊನೆಯ ೨೬ ಸಂಧಿಗಳಲ್ಲಿ ಉಷಾ ಅನಿರುದ್ಧರು ಪ್ರಧಾನವಾಗಿ ಕಂಡು ಬರುತ್ತಾರೆ. ವಾಸ್ತವದಲ್ಲಿ ಶ್ರೀಕೃಷ್ಣ ಕಾವ್ಯದ ನಾಯಕನಾಗಿ ಕಂಡರೂ, ಮೂರು ನಾಯಕ ಮತ್ತು ನಾಯಕಿರನ್ನು ಕಾಣಬಹುದಾಗಿದೆ. ಶ್ರೀಕೃಷ್ಣನ ವಂಶದ ಕುಡಿಗಳೇ ಇಲ್ಲಿ ಕಾಣುವುದರಿಂದ ಕನಕರಿಗೆ ಸ್ವಂತಿಕೆಯನ್ನು ಪ್ರದರ್ಶಿಸಲು ಸುಲಭವಾಯಿತು. ಶೈವ ಮತ್ತು ವೈಷ್ಣವರ ಬಾಂಧವ್ಯಕ್ಕೆ ಪ್ರೇಮವಿವಾಹಗಳು ಸಾಕ್ಷಿಯಾಗುವುದೇ ಎನ್ನುವ ಪ್ರಶ್ನೆ ಇಲ್ಲಿ ಉದ್ಭವಿಸುತ್ತದೆ.

ಕನಕದಾಸರಿಗೆ ಮೋಹನ ತರಂಗಿಣಿಯನ್ನು ರಚಿಸುವಲ್ಲಿ ಪುರಾಣಗಳು ಮತ್ತು ಕಾವ್ಯಗಳು ನೇರ ಆಕರವಾಗಿದ್ದರೂ ಯಾವುದನ್ನು ಯಥಾವತ್ತಾಗಿ ಅನುಸರಿಸಿಲ್ಲ. ಸಂದರ್ಭೋಚಿತವಾಗಿ ಅಗತ್ಯ ಬದಲಾವಣೆಗಳನ್ನು ಮಾಡಿಕೊಂಡು ಸ್ವಂತಿಕೆಯನ್ನು ತಂದಿದ್ದಾರೆ. ಇಲ್ಲಿ ಕಥೆ ಯಾವುದೇ ಪುರಾಣಗಳಂತೆ ಒಬ್ಬ ಋಷಿ ಇನ್ನೊಬ್ಬ ಋಷಿಗಾಗಲಿ, ಒಬ್ಬ ಗುರು ತನ್ನ ಶಿಷ್ಯನಿಗೆ ಹೇಳುವ ಮಾದರಿಯಲ್ಲಿ ಮುಂದುವರಿಯದೆ ಶೃಂಗಾರಭರಿತ ನೆಲೆಯಿಂದ ತನ್ನ ಮಡದಿ ಸುಜ್ಞಾನವಧೂಟಿಗೆ ಕಥೆ ಹೇಳಿರುವುದು ಇಲ್ಲಿಯ ವಿಶೇಷ. ವಿಜಯನಗರದ ರಾಜಧಾನಿಯಿಂದ ಪಡುಕರಾವಳಿ ತೀರದವರೆಗಿನ ಜನಜೀವನ ಆಚರಣೆ ಸಂಪ್ರದಾಯಗಳಿಗೆ ಸ್ಪಂದಿಸಿರುವ ಜನಪರಕವಿಯಾಗಿ ಕನಕರು ಗುರುತಿಸಿಕೊಂಡಿದ್ದಾರೆ. ಕನಕರ ಅಪಾರವಾದ ಜೀವನಾನುಭವ ಮತ್ತು ಜೀವನಪ್ರೀತಿ ಕಾವ್ಯಕ್ಕೆ ಆಕರವಾಗಿ ಪುರಾಣಕಥೆಯ ಮೆರುಗನ್ನು ಹೆಚ್ಚಿಸುವಲ್ಲಿ ಕಾರಣವಾಗಿದೆ ಎಂದರೆ ತಪ್ಪಾಗಲಾರದು.

ಮೋಹನ ತರಂಗಿಣಿಯಲ್ಲಿ ಪ್ರತಿಪಾದಿತವಾಗಿರುವ ಪ್ರಮುಖ ಮೂರು ಅಂಶಗಳೆಂದರೆ ಶೃಂಗಾರ, ಶೌರ್ಯ ಮತ್ತು ಭಕ್ತಿ.ಶೃಂಗಾರ ರಸವು ಹೆಣ್ಣು ಗಂಡನ್ನು ಬಯಸುವ ಸಂದರ್ಭಗಳಲ್ಲಿ ವ್ಯಕ್ತವಾದರೆ, ಶೌರ್ಯವು ಪುರುಷ ಪ್ರಧಾನವಾದ ಯುದ್ಧಗಳಲ್ಲಿ ಕಂಡು ಬರುತ್ತದೆ. ಭೋಗಮೂಲವಾದ ಶೃಂಗಾರದ ಅಧಿಪತ್ಯವೇ ಕಾವ್ಯದ ತುಂಬ ಬೇರೆ ಬೇರೆ ಸಂದಭಗಳಲ್ಲೂ ಪರಂಪರೆಯ ಶ್ರೇಣೀಕೃತ ವ್ಯವಸ್ಥೆಯ ಮೌಲ್ಯವನ್ನೇ ಕನಕರು ಅನುಸರಿಸಿದ್ದಾರೆ. ಶೃಂಗಾರದಲ್ಲಿ ಹೆಣ್ಣು ಗಂಡಿನ ಶ್ರೇಣಿಯಾದರೆ ಶೌರ್ಯದಲ್ಲಿ ಸುರ-ಅಸುರರ ಶ್ರೇಣಿ ಇದೆ.ಇಲ್ಲಿ ಗೆಲುವು ಪ್ರಭುತ್ವದ ಗಂಡಿನದ್ದೇ ಹೊರತು ಹೆಣ್ಣಿನದ್ದಲ್ಲ. ಶೌರ್ಯದಲ್ಲಿಯೂ ದೇವರ ಪ್ರಭುತ್ವವೇ ಕೊನೆಗೆ ವಿಜೃಂಭಿಸುವುದು. ಕನಕದಾಸರು ಪ್ರಭುತ್ವದ ಭಾಗವಾಗಿಯೇ ಸಾಮರಸ್ಯದ ನೆಲೆಯಲ್ಲಿ ಸಾಗಿದ್ದಾರೆ.

ಉತ್ಥಾನ ಶೃಂಗಾರವನ್ನು ಭಕ್ತಿಯ ಕೊಳಗದಲ್ಲಿ ಅಳೆಯುವ ಕೆಲಸ ಕನಕರ ಬಹುರೂಪಿ ವ್ಯಕ್ತಿತ್ವದ ಒಂದು ಭಾಗವಾಗಿಯೇ ಮೂಡಿಬಂದಿದೆ. ಭೌತಿಕ ಸುಖವನ್ನು ಮೀರಿದ ಭೋಗದ ಕುರಿತು ಅವರ ಒಲವಿತ್ತು. ಭೋಗ ಮತ್ತು ಶೃಂಗಾರದ ಉತ್ತುಂಗಸ್ಥಿತಿಯಲ್ಲಿಯೂ ಭಕ್ತಿಯ ಸೃಜಿಸುವ ಸಾಹಸ ಕನಕರದ್ದು. ಬಾಣಾಸುರ ಪತ್ನಿಯೊಂದಿಗೆ ಸುಖಿಸಿ ನಂತರ ಚಿತ್ತವನ್ನು ಶಿವನಲ್ಲಿ ನೆಟ್ಟ ಎನ್ನುವ ಚಿತ್ರಣದಲ್ಲಿ, ಶಿವನನ್ನು ನೆನಪಿಸುವ ನೆಮ್ಮದಿ ಆ ದಾಂಪತ್ಯದ ಮಿಲನದಲ್ಲಿತ್ತು ಎಂಬ ಕಲ್ಪನೆಯೆ ಅದ್ಭುತವಾಗಿದೆ.

ಮೋಹನ ತರಂಗಿಣಿಯ ಕಥಾನಾಯಕ ಶ್ರೀಕೃಷ್ಣ. ಶ್ರೀಕೃಷ್ಣ ನಮ್ಮ ಪರಂಪರೆಯಲ್ಲಿ ಜೀವನಪ್ರೀತಿಯ ಸಂಕೇತವಾಗಿ ಗುರುತಿಸಲ್ಪಟ್ಟವನು. ಕನಕರ ಬದುಕಿನ ವಿಶೇಷತೆಯೂ ಜೀವನಪ್ರೀತಿಯೇ. ಆದ್ದರಿಂದ ಮೂರು ತಲೆಮಾರನ್ನು ಪ್ರತಿನಿಧಿಸುವ ಕೃಷ್ಣನ ಕಥೆಯ ಮೂಲಕ ಮನಸ್ಸಿನ ಭಾವನೆಗಳಿಗೆ, ಹೊಯ್ದಾಟಗಳಿಗೆ ರೂಪಕೊಡುವ ಕೆಲಸವನ್ನು ಕನಕರು ಮಾಡಿದ್ದಾರೆ. ಕಾವ್ಯದಲ್ಲಿ ಶ್ರೀಕೃಷ್ಣನ ವ್ಯಕ್ತಿತ್ವದ ಬೇರೆ ಬೇರೆ ಮಜಲುಗಳನ್ನು ಕಾಣಬಹುದಾಗಿದೆ. ರಾಸಲೀಲೆಯ ಕೃಷ್ಣ, ಜವಾಬ್ದಾರಿಯ ಪ್ರೌಢ ಕೃಷ್ಣ, ಎಲ್ಲ ಗೊತ್ತಿದ್ದು, ಏನೂ ಗೊತ್ತಿಲ್ಲದವನಂತೆ ವ್ಯವಸ್ಥೆಯನ್ನು ಮುನ್ನಡೆಸುವ ಕೃಷ್ಣ, ಭಕ್ತರ ಮನಸ್ಸಿನಲ್ಲಿ ನಿಂತ ಭಗವಂತನಾಗಿಯೂ ಕಾಣಿಸಿಕೊಂಡಿದ್ದಾನೆ. ದ್ವಾರಕೆಯ ಶ್ರೀಕೃಷ್ಣನೇ ವಿಜಯನಗರದ ಶ್ರೀಕೃಷ್ಣ ದೇವರಾಯನಾಗಿ, ಆ ಕಾಲದ ಸಮಸ್ತ ಚಟುವಟಿಕೆಗಳು ೧೬ನೇ ಶತಮಾನದ ಬದುಕಿನ ಪ್ರತಿರೂಪವಾಗಿ, ಧ್ವನಿಸಿರುವುದು ತರಂಗಿಣಿಯ ವಿಶೇಷತೆ. ಪುರಾಣದ ಅರಮನೆಯಲ್ಲಿ ಇತಿಹಾಸದ ರಾಜನನ್ನು ಕಾಣಿಸಿರುವುದು ಕನಕರ ಪ್ರತಿಭೆಗೆ ಸಾಕ್ಷಿ. ಹೀಗಾಗಿ ಚಾರಿತ್ರಿಕ ಮತ್ತು ಸಾಮಾಜಿಕ ನೆಲೆಯಲ್ಲಿ ವಿಸ್ತೃತವಾದ ಅಧ್ಯಯನಕ್ಕೆ ಇಲ್ಲಿ ಅವಕಾಶವಿದೆ.

ಮೋಹನತರಂಗಿಣಿಯಲ್ಲಿ ಪುರಾಣದ ರಾಕ್ಷಸ ಪಾತ್ರಗಳಿಗೆ ಕನಕದಾಸರು ಮಾನವೀಯ ಸ್ಪರ್ಶ ನೀಡಿದ್ದಾರೆ. ಇತರೆ ಪುರಾಣದ ಪಾತ್ರಗಳಲ್ಲಿಯ ರಾಕ್ಷಸರ ದುಷ್ಟತನ, ಹಿಂಸೆ ಅತಿರೇಕದ ವರ್ಣನೆ ಇಲ್ಲಿಲ್ಲ. ಸುರ-ಅಸುರರ ಸಾಮರಸ್ಯವೇ ಕನಕರ ಉದ್ದೇಶವಾಗಿತ್ತು ಎನ್ನುವುದು ಸ್ಪಷ್ಟ. ತರಂಗಿಣಿಯಲ್ಲಿ ಬರುವ ಎರಡು ರಾಕ್ಷಸ ಪಾತ್ರಗಳು ಒಂದು ಶಂಬರಾಸುರ, ಇನ್ನೊಬ್ಬ ಶಿವಭಕ್ತ ಬಾಣಾಸುರ. ಇವರಿಬ್ಬರೂ ದುಷ್ಟರಲ್ಲ. ತಮ್ಮ ತಪ್ಪನ್ನೂ ತಿದ್ದಿಕೊಳ್ಳುವ ಆದರೆ ಶೌರ್ಯವನ್ನೇ ಆರಿಸಿಕೊಳ್ಳುವ ಉದಾತ್ತ ವ್ಯಕ್ತಿಗಳಾಗಿ ಕಾಣಿಸಿಕೊಂಡಿದ್ದಾರೆ. ದಾನವರಲ್ಲಿನ ಉದಾತ್ತಗುಣವನ್ನು ಪ್ರಕಟಿಸಿ ಅವರ ವ್ಯಕ್ತಿತ್ವವನ್ನೂ ಹೊಸ ನೆಲೆಯಲ್ಲಿ ಅನಾವರಣ ಮಾಡಿದ್ದು ಕನಕರ ಹೆಗ್ಗಳಿಕೆ. ಇದರಿಂದಾಗಿ ದೇವಪಾತ್ರಗಳಿಗಿಂತಲೂ ದಾನವ ಪಾತ್ರಗಳೇ ನಡೆನುಡಿ, ಚಾರಿತ್ರ್ಯದಲ್ಲಿ ಓದುಗರ ಗಮನ ಸೆಳೆಯುತ್ತವೆ. ಪ್ರಭುತ್ವದ ಮಿತಿಯಲ್ಲಿಯೂ ಒಳ್ಳೆಯದನ್ನು ಸೂಚಿಸುವ ಕನಕರು ಪರೋಕ್ಷವಾಗಿ ಗಮನ ಸೆಳೆಯುತ್ತಾರೆ.

ಶಂಬರಾಸುರ ತನಗೆ ಬಂದೊದಗಬಹುದಾದ ಕೇಡಿನಿಂದ ತಪ್ಪಿಸಿಕೊಳ್ಳಲು, ರುಕ್ಮಿಣಿಯ ಮಗುವಾಗಿರುವ ಪ್ರದ್ಯುಮ್ನನನ್ನು ಅಪಹರಿಸಿ ಕಡಲಲ್ಲಿ ಎಸೆಯುವ ಒಂದು ಕೆಟ್ಟ ಕೃತ್ಯಕ್ಕೆ ಮುಂದಾಗುವುದು ಅವನ ಬದುಕಿನ ಒಂದು ದೊಡ್ಡ ದುರಂತ. ತದನಂತರ ಶಂಬರನ ವರ್ತನೆಯಲ್ಲಿ ಯಾವುದೇ ದುರುಳತನದ ಸ್ವಭಾವಗಳಿಲ್ಲ. ತನ್ನ ರಾಜ್ಯ ಸೇರಿದ ರತಿಯನ್ನು ಬಯಸಿ, ಅವಳು ಒಪ್ಪದಿದ್ದಾಗ ದಾಸಿಯಾಗಿ ಸ್ವತಂತ್ರಳಾಗಿ ಬದುಕಲು ಅವಕಾಶ ಕಲ್ಪಿಸಿದ್ದು, ರತಿಯ ಮಾತುಗಳಲ್ಲಿ ನಂಬಿಕೆ ಇರಿಸಿ, ಪ್ರದ್ಯುಮ್ನನಿಗೆ ತಾನು ಗುರುವಿನಿಂದ ಕಲಿತ ವಿದ್ಯೆಯನ್ನು ಧಾರೆ ಎರೆದದ್ದು, ತನ್ನ ಪತ್ನಿಯ ಮಾತುಗಳಿಗೆ ಮಾನ್ಯತೆ ನೀಡಿರುವುದು ಇಲ್ಲೆಲ್ಲ ಶಂಬರನ ವ್ಯಕ್ತಿತ್ವವೇ ಪ್ರಜ್ವಲಿಸಿದೆ. ಪರೋಕ್ಷವಾಗಿ ನಾರದನ ಕುಹಕವೇ ಅಸಹ್ಯ ಹುಟ್ಟಿಸುವಂತಿದೆ. ಸಾಮಾನ್ಯ ಮನುಷ್ಯ ಸ್ವಭಾವವನ್ನು ಹೊಂದಿದ ರಾಕ್ಷಸಕುಲದ ರಾಜನಾಗಿ ಶಂಬರಾಸುರ ಕಾಣಿಸಿಕೊಂಡಿದ್ದಾನೆ.

ಹರಿಹರರಲ್ಲಿ ಅಭೇದವನ್ನು ಸೂಚಿಸುವ ನೆಲೆಯಲ್ಲಿ, ಧರ್ಮಸಾಮರಸ್ಯವನ್ನು, ಯುದ್ಧ ವಿರೋಧಿ ನಿಲುವನ್ನು ಪ್ರತಿಪಾದಿಸುವ ನೆಲೆಯಲ್ಲಿ, ಕನಕದಾಸರು ರಚಿಸಿರುವ ಇನ್ನೊಂದು ರಾಕ್ಷಸ ಪಾತ್ರ ಬಾಣಾಸುರ. ಶಿವನನ್ನು ಮೆಚ್ಚಿಸಿ ಸಾವಿರಬಾಹುಗಳನ್ನು ಪಡೆದ ಪರಾಕ್ರಮಿ ಹಾಗೂ ಶಿವಭಕ್ತ ಬಾಣಾಸುರ. ತನ್ನ ಶಕ್ತಿಗೆ ಸರಿಸಮಾನವಾದ ಯುದ್ಧವೀರನನ್ನು ಭಯಸಿ, ಶ್ರೀಕೃಷ್ಣನನ್ನೇ ಯುದ್ಧಕ್ಕೆ ಆಹ್ವಾನಿಸಿದ ವೀರ. ಆದರೆ ತನ್ನ ಮಗಳನ್ನು ಕದ್ದುಕೂಡಲು ಬಂದವನ ಜೊತೆಯಲ್ಲಿ ಹೋರಾಡಿ ಅವನತಿ ಹೊಂದಿದವ. ಇಷ್ಟಲ್ಲದೇ ಬಾಣಾಸುರನ ವ್ಯಕ್ತಿತ್ವದಲ್ಲಿ ಗೋಚರಿಸುವ ಇನ್ನೆರಡು ಅಂಶಗಳೆಂದರೆ ಶೀಲವಂತನಾಗಿ ತನ್ನ ಪತ್ನಿಯೊಂದಿಗೆ ಸಾಮರಸ್ಯದ ಬದುಕನ್ನು ಸಾಗಿಸಿದ್ದು, ತನ್ನ ದೇವರಾದ ಶಿವನನ್ನೇ ತನ್ನ ಮನೆಯ ಕಾವಲುಗಾರನಾಗಿ ನಿಯಮಿಸಿಕೊಂಡದ್ದು.

ಬಾಣಾಸುರ ಅನಿರುದ್ಧನೊಂದಿಗೆ ಯುದ್ಧ ಮಾಡುವ ಕಾರಣಕ್ಕೂ, ವ್ಯಭಿಚಾರಿಯಾದ ಮೊಮ್ಮಗನ ಪರವಹಿಸಿ ಶ್ರೀಕೃಷ್ಣ ಯುದ್ಧ ಮಾಡುವುದಕ್ಕೂ ಕವಿ ನೀಡಿರುವ ವ್ಯತ್ಯಾಸ ಆ ಪಾತ್ರಗಳ ಯೋಗ್ಯತೆಯನ್ನು ಸೂಚಿಸುತ್ತವೆ. ಅಲ್ಲದೇ ಬಾಣಾಸುರ ತನ್ನ ಮಗಳ ಕಾರಣಕ್ಕಾಗಿ ಅನಿರುದ್ಧನನ್ನು ಕೊಲ್ಲದೇ ಉಳಿಸುವಲ್ಲಿಯೂ ಧರ್ಮಸಂಕಟಕ್ಕೆ ಗುರಿಯಾಗಿದ್ದಾನೆ. ಇಲ್ಲೆಲ್ಲ ದಾನವರಾಜನೇ ಓದುಗರ ಮನಸ್ಸಿನಲ್ಲಿ ಸ್ಥಾನ ಪಡೆಯುತ್ತಾನೆ.

ಕನಕದಾಸರು ಭಕ್ತಿಯ ಸಿದ್ಧ ಮಾದರಿಯನ್ನು ಮುರಿದಿರುವುದು ಒಂದು ಕ್ರಾಂತಿಕಾರಿ ಹೆಜ್ಜೆ. ಭಕ್ತರ ಮನೆಯಲ್ಲಿರುವ ಸೇವಕನಾಗಿರುವ ದೇವರು ಬೇಕು, ಕೈಲಾಸದ ಶಿವನಲ್ಲ ಎನ್ನುವ ಬಾಣಾಸುರನ ಗ್ರಹಿಕೆ ಒಂದು ಕ್ರಾಂತಿಕಾರಿ ನಿಲುವು. ಕೊನೆಯಲ್ಲಿ ಯುದ್ಧಕ್ಕೆ ಬಂದ ಶಿವನೇ, ಕೃಷ್ಣ ಮತ್ತು ತಾನು ಒಂದೇ ಎಂಬುದಾಗಿ ಘೋಷಣೆ ಮಾಡುವುದರ ಮೂಲಕ ಸಾಮರಸ್ಯದ ವಾತಾವರಣ ಮೂಡಿಸಿದ್ದಾನೆ. ಇಲ್ಲಿಯೂ ಕನಕರಿಗೆ ಪ್ರಭುತ್ವದ ಹಿಡಿತದಿಂದ ತಪ್ಪಿಸಿಕೊಳ್ಳಲಾಗದಿದ್ದರೂ ತನ್ನ ಮನಸ್ಸಿನ ಗ್ರಹಿಕೆಯನ್ನು ಓದುಗರಿಗೆ ಮುಟ್ಟಿಸುವಲ್ಲಿ ಸಮರ್ಥರಾಗಿದ್ದಾರೆ ಎಂದು ತೃಪ್ತಿಪಟ್ಟುಕೊಳ್ಳಬಹುದು.

ಮೋಹನ ತರಂಗಣಿಯಲ್ಲಿ ಕನಕರು ಸಾರಿರುವ ಪ್ರಮುಖ ಸಂದೇಶ ಯುದ್ಧ ವಿರೋಧಿ ನಿಲುವು ಮತ್ತು ಧರ್ಮಸಾಮರಸ್ಯ ಎನ್ನುವುದು ಬಹುಜನರು ಒಪ್ಪಿರುವ ವಿಚಾರ. ಸ್ವತಃ ಯುದ್ಧ ವೀರರಾದ ಕನಕರು ಅದರ ಆಗುಹೋಗುಗಳನ್ನು ಅನುಭವಿಸಿ ಅದರಿಂದ ವಿಮುಖರಾಗಿ ದಾಸರಾಗಿ ಪರಿವರ್ತನೆ ಹೊಂದಿದವರು. ದಿಗ್ವಿಜಯದ ಸಂಭ್ರಮವನ್ನು ಆಚರಿಸುವಾಗ ಅದರಾಳದ ಕ್ರೂರ ಇತಿಹಾಸದ ಪರಿಚಯ ಅನೇಕರಿಗೆ ಆಗದೇ ಹೋಗಬಹುದು. ಇಂದಿನ ಆಧುನಿಕ ಬದುಕು ಧರ್ಮ ಮತ್ತು ಯುದ್ಧದ ಹೆಸರಿನಲ್ಲಿ ರಕ್ತಮಯವಾಗಿ ಬದಲಾಗುತ್ತಿರುವ ಸನ್ನಿವೇಶದಲ್ಲಿ ಅದರ ನಿರಾಕರಣೆಯ ಮೂಲಕ ಕನಕರು ಪ್ರಸ್ತುತರಾಗಿದ್ದಾರೆ. ವಿಜಯನಗರದ ಉನ್ನತಿ ಅವನತಿಗಳೆರಡನ್ನೂ ಕಂಡ ಕನಕರು ಈ ಕೃತಿಯ ಮೂಲಕ ಹೊಸ ಸಂದೇಶವನ್ನು ನೀಡಿರುವ ಅವರ ಸಾಮಾಜಿಕ ಕಾಳಜಿ ಶ್ಲಾಘನೀಯ.

ಶೃಂಗಾರವೇ ಪ್ರಧಾನ ಭೂಮಿಕೆಯಲ್ಲಿರುವ ಮೋಹನ ತರಂಗಿಣಿಯಲ್ಲಿ ಹೆಣ್ಣಿನ ಪರಿಕಲ್ಪನೆ ಹೇಗಿರಬಹುದು ಎನ್ನುವುದು ಕುತೂಹಲಕಾರಿಯಾದ ಅಂಶ. ತರಂಗಿಣಿಯಲ್ಲಿ ಕಥೆ ನೆಪ ಮಾತ್ರಕ್ಕೆ, ಹೆಣ್ಣಿನ ಸೌಂದರ್ಯ ವರ್ಣನೆಯೇ ಪ್ರಮುಖ ಉದ್ದೇಶ ಎಂಬಷ್ಟರಮಟ್ಟಿಗೆ ಹೆಣ್ಣಿನ ವರ್ಣನೆ ತುಂಬಿದೆ. ಅದರಲ್ಲೂ ಹೆಣ್ಣಿನ ಯೌವನ ಕಾಲದ ದೇಹ ಸೌಷ್ಠವತೆಗೆ ಕವಿ ಹೆಚ್ಚು ಪ್ರಾಶಸ್ತ್ಯ ನೀಡಿರುವುದು ಕಿರಿಕಿರಿ ಎನ್ನುವಷ್ಟರ ಮಟ್ಟಿಗೆ ಬೆಳೆದಿದೆ. ರುಕ್ಮಿಣಿ, ರತಿ, ಉಷೆ ಹಾಗೂ ಅವಳ ಗೆಳತಿ ಚಂದ್ರಲೇಖೆ, ಅಂತಃಪುರದ ಸ್ತ್ರೀಯರು, ಪರಿಚಾರಿಕೆಯರ ವರ್ಣನೆಯಲ್ಲಿ ಶೃಂಗಾರ ಮೈದುಂಬಿ ನಿಂತಿದೆ. ಕನಕದಾಸರ ಸ್ತ್ರೀ ಪಾತ್ರಗಳು ಸಂಪ್ರದಾಯದಂತೆ ಸ್ತ್ರೀ ವಿರೋಧಿಗಳಲ್ಲ. ಪರಸ್ಪರ ವಿರೋಧಿ ನೆಲೆಯ ಪಾತ್ರಗಳಲ್ಲೂ ಹೊಂದಾಣಿಕೆಯ, ಅನುಕಂಪ ತೋರುವ ಸಹಾಯ ಹಸ್ತವನ್ನು ಚಾಚುವ ಸಾಮಾನ್ಯ ಹೆಣ್ಣಿನಂತೆಯೇ ಚಿತ್ರಣಗೊಂಡಿದೆ.ಕನಕರ ಜೀವನ ಪ್ರೀತಿ, ಸಾಮರಸ್ಯದ ಗುಣ ಈ ಪಾತ್ರಗಳನ್ನು ಸೃಜಿಸುವಲ್ಲಿ ಸಹಜವಾಗಿ ಕೆಲಸ ಮಾಡಿದೆ.ಶಂಬರಾಸುರ ರತಿಯನ್ನು ಒಲಿಸಿಕೊಡುವಂತೆ ತನ್ನ ಪತ್ನಿಯಲ್ಲಿಯೇ ನಿವೇದಿಸುವುದು ಆಶ್ಚರ್ಯವನ್ನು ಹುಟ್ಟಿಸುತ್ತದೆ. ಚಿತ್ರಲೇಖೆಯ ಪಾತ್ರವಂತೂ ಆಧುನಿಕ ಮನಸ್ಸಿಗೆ ತೀರ ಹತ್ತಿರವಿದ್ದಂತೆ ಕಾಣುತ್ತದೆ. ಬಾಣಾಸುರನ ಮಂತ್ರಿಯ ಮಗಳಾಗಿ, ಪ್ರಭುತ್ವದ ಪ್ರತಿಷ್ಠೆಯನ್ನು ದಿಕ್ಕರಿಸಿ ತನ್ನ ಗೆಳತಿಯನ್ನು ಮೆಚ್ಚಿದವನ ಜೊತೆಯಲ್ಲಿ ಒಂದುಗೂಡಿಸಲು ಪಡುವ ನಿಸ್ವಾರ್ಥ ಪ್ರಯತ್ನಗಳು ಮೆಚ್ಚುಗೆಯನ್ನು ಪಡೆಯುತ್ತದೆ. ಹಾಗೆಯೇ ದಾನವರಾಜನ ಪ್ರಜೆಯಾಗಿ ಸುರರ ಪರವಾಗಿ ಆಕೆಯ ತೀರ್ಮಾನಗಳು ಮತ್ತೆ ಪ್ರಶ್ನೆಯಾಗಿಯೇ ಉಳಿಯುತ್ತವೆ.

ತರಂಗಣಿಯಲ್ಲಿ ಗಮನಿಸಬೇಕಾದ ಇನ್ನೊಂದು ಮುಖ್ಯ ಅಂಶವೆಂದರೆ ಕಾಮದ ದುರ್ಬಲತೆಯ ಒಳಗಾಗಿ ಅದಕ್ಕಾಗಿ ವ್ಯವಧಾನವನ್ನು ಮೀರಿದ ವರ್ತನೆಯನ್ನು ಪ್ರಕಟಿಸುವುದು ಹೆಣ್ಣು. ಇದು ಪರೋಕ್ಷವಾಗಿ ಪ್ರಭುತ್ವದ ಮಾದರಿಯನ್ನೇ ಬೆಂಬಲಿಸಿದಂತೆ ಕಾಣುತ್ತದೆ. ಇಲ್ಲಿ ಗಂಡು ವ್ಯವಧಾನದಿಂದ ಹೆಣ್ಣಿನ ಆಸೆಯನ್ನು ಪೂರೈಸುತ್ತಾನೆ. ಶ್ರೀಕೃಷ್ಣ ರುಕ್ಮಿಣಿಯ ಸಂದರ್ಭ ಹಾಗೂ ಉಷಾ ಅನಿರುದ್ಧರ ಪ್ರಸಂಗಗಳಲ್ಲಿ ಮೇಲಿನ ಮಾತು ಸ್ಪಷ್ಟವಾಗುತ್ತದೆ. ಭೋಗದಲ್ಲಿ ಗಂಡಿಗೆ ಆಯ್ಕೆ ಪ್ರಶ್ನೆಯಾದರೆ ಹೆಣ್ಣಿಗೆ ಅಸ್ಥಿತ್ವದ ಪ್ರಶ್ನೆಯಾಗಿ ಕಾಡುವುದನ್ನು ಕನಕರ ಮನಸ್ಸು ಸೂಕ್ಷ್ಮವಾಗಿ ಗ್ರಹಿಸಿದೆ. ಜಲಕ್ರೀಡೆಯ ಸಂದರ್ಭಗಳಲ್ಲಿ ಇದನ್ನು ಗಮನಿಸಬಹುದು.

ಕನಕದಾಸರ ಮೋಹನ ತರಂಗಣಿಯನ್ನು ಶೃಂಗಾರಕಾವ್ಯ, ಭಕ್ತಿಕಾವ್ಯ, ಪ್ರಭುತ್ವದ ಕಾವ್ಯ ಹೋರಾಟದ ಕಾವ್ಯವೆಂದು ವಿವರಿಸಿಕೊಳ್ಳುವಾಗಲೇ ಅಷ್ಟಕ್ಕೆ ಸೀಮಿತವಾಗದೆ ಅದೆಲ್ಲವನ್ನು ಮೀರುವ ಇನ್ನೊಂದು ಕ್ರಮದ ಆಲೋಚನೆಯನ್ನು ಬಿಂಬಿಸುವ ಸಾಂಸ್ಕೃತಿಕ ಪ್ರಭಾವಲಯ ತರಂಗಿಣಿಯಲ್ಲಿದೆ.ಕನಕದಾಸರ ದ್ವಂದ್ವ ವ್ಯಕ್ತಿತ್ವ ಅವರ ಸಾಹಿತ್ಯದ ಉದ್ದಕ್ಕೂ ಕಂಡರೂ ಅದಕ್ಕೆಲ್ಲ ಅವರ ಬಹುರೂಪಿ ಗುಣವೇ ಕಾರಣ.ಶೈವ ಮತ್ತು ವೈಷ್ಣವರ ಬಾಂಧವ್ಯಕ್ಕೆ ಪ್ರೇಮ ವಿವಾಹಗಳು ಸಾಕ್ಷಿಯಾಗುವುದು, ವ್ಯವಸ್ಥೆಯ ಲೋಪದೋಷಗಳನ್ನು ಖಾರವಾಗಿ ಖಂಡಿಸಿ ಅದರಲ್ಲಿಯೇ ಹೊಂದಾಣಿಕೆ ಮಾಡಿಕೊಂಡು ಬದುಕುವ ಅನಿವಾರ್ಯತೆ, ಪ್ರತಿರೋಧ ಮತ್ತು ಶರಣಾಗತ ಭಾವಗಳೆರಡು ಕೂಡಿರುವ ದ್ವಂದ್ವ ನಿಲುವು ಚಿಂತಕರನ್ನು ಸಂಶೋಧಕರನ್ನು ಪರಿಪರಿಯಾಗಿ ಕಾಡಿದೆ.

ಒಟ್ಟಾರೆ ಕನಕದಾಸರ ವ್ಯಕ್ತಿತ್ವದಲ್ಲಿ ಬಹುರೂಪತೆ ಇದೆ. ಅವರು ಪಾಳೆಯಗಾರ, ಕವಿ, ದಾಸ, ಕೀರ್ತನೆಗಾರ, ಶೂದ್ರಪ್ರತಿನಿಧಿ, ದೇಶಿ ಮತ್ತು ಶಿಷ್ಟ ಎರಡರ ಸಮನ್ವಯಕಾರ, ದ್ವೈತ ವಿಶಿಷ್ಟಾದ್ವೈತ ಅದ್ವೈತಗಳನ್ನು ಒಪ್ಪಿದವರು. ಅಷ್ಟಲ್ಲದೇ ಶೈವ ಪಂಥಗಳ ತತ್ವವನ್ನು ಸಮೀಕರಿಸಿಕೊಂಡವರು. ದಾಸನೊಬ್ಬನಿಗೆ ಸಾಧ್ಯವಾಗದ ಜೀವನ ಪ್ರೀತಿಯನ್ನು ಲೌಕಿಕ ಶೃಂಗಾರವನ್ನು ಕಾವ್ಯದಲ್ಲಿ ಕಟ್ಟಿದವರು. ಆದ್ದರಿಂದಲೇ ಅವರ ವ್ಯಕ್ತಿತ್ವದಲ್ಲಿ ಬಹುರೂಪತೆ ಇದೆ. ಅವರದೇ ಆದ ಸಾಂಸ್ಕೃತಿಕ ಗುರುತುಗಳಿವೆ. ಈ ಬಹುರೂಪದ ಕನಕರ ವ್ಯಕ್ತಿತ್ವವೇ ಸಹಜವಾಗಿ ಏಕರೂಪದ ರಾಜಕಾರಣವನ್ನು ಸಹಜವಾಗಿ ಪ್ರಶ್ನಿಸಿದೆ.

**ಪರಾಮರ್ಶನ ಗ್ರಂಥಗಳು**


1. ಮೋಹನತರಂಗಿಣಿ –ಡಾ. ಎಸ್.ಎಸ್. ಕೋತಿನ, ಪ್ರಕಾಶಕರು– ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪ್ರಥಮ ಮುದ್ರಣ ೧೯೮೪
2. ಕನಕರ ಕಾವ್ಯ ಸಂಪುಟ–ಸಂ: ಪ್ರೊ. ಎ.ವಿ. ನಾವಡ, ಪ್ರ: ಕನಕದಾಸ ಅಧ್ಯಯನ ಸಂಶೋಧನಾ ಪೀಠ, ಎಂ.ಜಿ.ಎಂ. ಕಾಲೇಜು, ಉಡುಪಿ ೨೦೧೧.
3. ಕನಕ ಮತ್ತು ಕನ್ನಡ ಮನಸ್ಸು –ಜಯಪ್ರಕಾಶ್ ಶೆಟ್ಟಿ ಹೆಚ್. ಪ್ರ: ರೂಪ ಪ್ರಕಾಶನ ಮೈಸೂರು ೨೦೧೫.
4. ಕನಕ ಚಿಂತನ ೨೦೦೯–೨೦೧೦ ಸಂ: ಡಾ. ಬಿ. ಶಿವರಾಮ ಶೆಟ್ಟಿ, ಪ್ರ: ಕನ್ನಡ ಸಂಶೋಧನಾ ಕೇಂದ್ರ ಮಂಗಳೂರು ವಿಶ್ವವಿದ್ಯಾನಿಲಯ, ೨೦೧೦.
5. ಕನಕ ಸಾಹಿತ್ಯ ದರ್ಶನ ಸಂಪುಟ –೨, ಪ್ರ: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು, ೧೯೯೧